ಪ್ರಧಾನ ದಿವಾಣಿ ನ್ಯಾಯಾಧಿಶರು ಹಾಗೂ ಪ್ರ. ದ. ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚಿಕ್ಕೋಡಿ. ಸಾಃ ಚಿಕ್ಕೋಡಿ.

| | |
|---|---|
| ಓ ಎಸ್ ನಂ | 232/2019 |
| ಕುಮಾರ | ಪಿ.ಡಬ್ಲ್ಯೂ2 |
| ದಿನಾಂಕ | 28-08-2023 |

<u>ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.</u>

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್ ಎಂ ಎಂ ನ್ಯಾಯವಾದಿಗಳಿಂದ

ನಾನು ದ್ವಿತಿಯ ಪಿ ಯು ಸಿ ವರೆಗೆ ಕನ್ನಡ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಮಹಾಜನ ಪೆಟ್ರೋಲ್ ಪಂಪನಲ್ಲಿ ಸುಮಾರು 35 ವರ್ಷಗಳಿಂದ ಕೆಲಸವನ್ನು ಮಾಡುತ್ತಿದ್ದೇನೆ. ಮಹಾಜನ್ ಎನ್ನುವವರು ನನ್ನನ್ನು ಕೆಲಸಕ್ಕೆ ನಿಮಿಸಿಕೊಂಡಿರುತ್ತಾರೆ. ನನ್ನ ಕೆಲಸಕ್ಕೆ ಪ್ರತಿ ತಿಂಗಳು ರೂ.15,000/- ಸಂಬಳವನು ನೀಡುತ್ತಾರೆ. ಈ ಮೊದಲು ಅಂದರೆ ಪ್ರಾರಂಬದಲ್ಲಿ ರೂ.350/- ನೀಡುತ್ತಿದ್ದು ಈಗ ರೂ.15,000/- ಗಳನ್ನು ನೀಡುತ್ತಿದ್ದಾರೆ. ಸದರಿ ಪೆಟ್ರೋಲ್ ಪಂಪ ಇರುವ ಜಾಗೆಯ ಸಿ ಟಿ ಎಸ್ ಸಂಖ್ಯೆ2255 ಎಂದು ಇರುತ್ತದೆ. ಅದರಂತೆ ಟಿ ಎಂ ಸಿ ಸಂಖ್ಯೆ 1188/ಎ ಎಂದು ಇರುತ್ತದೆ. ಸದರಿ ಜಾಗ ಈಗ ಮೊದಲು ತಾಲೂಕ ಪಂಚಾಯತಿಯವರಿಗೆ ಸೇರಿತ್ತು. ಸದರಿ ಜಾಗವನ್ನು ಬಾಡಿಗೆ ನಾತೆಯಿಂದ ಭಾರತ ಪೆಟ್ರೋಲಿಯಂ ಎನ್ನುವವರಿಗೆ ನೀಡಲಾಗಿತ್ತು. ಭಾರತ ಪೆಟ್ರೋಲಿಯಂ ನವರಿಗೆ ಸದರಿ ಜಾಗೆಯನ್ನು ಬಾಡಿಗೆ ನಾತೆಯಿಂದ ನೀಡಿರುವ ಕುರಿತು ನಾನು ದಾಖಲೆಯನ್ನು ಪರಿಶೀಲನೆ ಮಾಡಿಲ್ಲ. ಮಹಾಜನ್ ಎನ್ನುವವರು ತಾಲೂಕಾ ಪಂಚಾಯತಿಯವರ ಮೇಲೆ ಮತ್ತೊಂದು ಪ್ರಕರಣವನ್ನು ದಾಖಲಿಸಿರುವ ಕುರಿತು ನನಗೆ ಮಾಹಿತಿ ಇರುವುದಿಲ್ಲ. ಸದರಿ ಪ್ರಕರಣ ಮೂಲ ದಾವಾ ಸಂಖ್ಯೆ67/2019 ಎಂದು ಇರುತ್ತದೆ ಎಂದರೆ ನನಗೆ ಗೊತ್ತಿಲಲ. ಸದರಿ ದಾವೆಯಲ್ಲಿ ಪಂಚಾಯತಿಯ ವಿರುದ್ಧ ನಿರ್ಬಂದಕಾಜ್ಞೆಯನ್ನು ಕೋರಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಿರ್ಬಂದಕಾಜ್ಞೆ ದೊರೆಯದೇ ಇರುವುದರಿಂದ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯದ ಮುಂದೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿ ವಜಾ ಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ಮೂಲ ದಾವೆ ಸಂಖ್ಯೆ 67/2019 ದಾವೆಯನ್ನು ಹಿಂದೆ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ಮಹಾಜನ್ ಇವರ ಪಾಲುದಾರಿಕಾ ಸಂಸ್ಥೆಗೆ ಬಾಡಿಗೆಯಿಂದ ನೀಡಲಾಗಿತ್ತು ಎಂದು ಸೂಚಿಸುವುದು ಸರಿಯಲ್ಲ. ಸದರಿ ಪಾಲುದಾರಿಕಾ ಸಂಸ್ಥೆಗೆ ನೀಡಲಾದ ಆಸ್ತಿ ಬಾಡಿಗೆ ಕರಾರು ಪತ್ರದಲ್ಲಿ ಪ್ರತಿ ತಿಂಗಳು 5 ತಾರಿಖಿನ ಒಳಗಡೆ ಬಾಡಿಗೆಯನ್ನು ನೀಡುವಂತೆ ಷರತ್ತು ಇತ್ತು ಎಂದು ಸೂಚಿಸುವುದು ಸರಿ. ಸದರಿ ಸ್ಥಳವನ್ನು ಸುಸ್ಥಿತಿಯಲ್ಲಿ ಇಡುವಂತೆ ಷರತ್ತು ಇತ್ತು ಎಂದು ಸೂಚಿಸುವುದು ಸರಿ. 2016 ರಿಂದ 2019 ವರೆಗೆ ಮಹಾಜನ್ ಎನ್ನುವವರು ತಾಲೂಕಾ

ಪಂಚಾಯತಿಗೆ ಬಾಡಿಗೆಯನ್ನು ಸಂದಾಯ ಮಾಡಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಆದ್ದರಿಂದ ಪಂಚಾಯತಿಯವರು ಮಹಾಜನ್ ಎನ್ನುವವರಿಗೆ ದಿಃ26-09-2018 ರಂದು ನೋಟಿಸು ನೀಡಿದ್ದರು ಎಂದು ಸೂಚಿಸುವುದು ಸರಿಯಲ್ಲ. 2016 ರಿಂದ 2018 ವರಗೆ ಪೆಟ್ರೋಲ್ ಪಂಪ ಮುಚ್ಚಲ್ಪಟ್ಟಿತ್ತು ಆದ್ದರಿಂದ ಬಾಡಿಗೆ ಹಣವನ್ನು ಸಂದಾಯ ಮಾಡಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಿ ಪಿ 4 ರಲ್ಲಿ ಕಾಣುವ ವಾಹನ ಮಹಾಜನ ಎನ್ನುವವ ವಾಹನ ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ದಾಖಲೆಯನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ನಿ ಪಿ 3 ರಿಂದ 7 ರ ವರಿಗೆ ಕಾಣುವ ದಾಖಲೆಗಳಲ್ಲಿ ಬಾಡಿಗೆ ಸ್ಥಳವನ್ನು ಸುಸ್ಥಿತಿಯಲ್ಲಿ ಇಟ್ಟಿರುವುದು ಕಂಡು ಬರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. 2016 ರಿಂದ 2018 ವರೆಗೆ ಪೆಟ್ರೂಲ ಪಂಪನಿಂದ ಮಾರಾಟವಾದ ಪೆಟ್ರೂಲಿನ ವಿವರ ಮತ್ತು ಪೆಟ್ರೂಲ ಪಂಪಿನಿಂದ ಖರೀದಿ ಮಾಡಿದ ವಿವರ ಪಟ್ಟಿಯನ್ನು ಹಾಜರು ಪಡಿಸುತ್ತೇನೆ. ಅದರಂತೆ ಸದರಿ ಅವಧಿಯಲ್ಲಿ ಆಗಿರುವ ವ್ಯವಹಾರದ ಕುರಿತಾಗಿ ದಾಖಲೆಯನ್ನು ಹಾಜರು ಪಡಿಸುತ್ತೇನೆ. ನಾನು ವಾದಿಯರ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವುದರಿಂದ ಅವರಿಗೆ ಸಹಾಯ ಮಾಡಲು ಅವರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ವಾದಿಯರಿಗೆ ದಾವಾ ಸ್ವತ್ತನ್ನು ನೀಡಿರುವ ಬಾಡಿಗೆ ಅವಧಿ ಮುಕ್ತಾಯ ಗೊಂಡಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ

(ಸಾಕ್ಷಿಯ ಹೇಳಿಕೆಯನ್ನು ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರರಿಗೆ ಓದಿ ಹೇಳಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧಿಶರು,
ಚಿಕ್ಕೋಡಿ.